- -

<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ತರೀಕೆರೆ</u>

<u>ಸಿ.ಸಿ.ನಂ.446/2021</u>

ಚಾಸಾ: 1 ಪ್ರಾಸಾ:1

ದಿನಾಂಕಃ 19.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು– | ಸುರೇಶ್.ಎಂ.ಎನ್. |
| ತಂದೆಯ ಹೆಸರು– | ನಿಂಗೇಗೌಡ |
| ವಯಸ್ಸು – | 52 ವರ್ಷ |
| ಉದ್ಯೋಗ– | ಅಬಕಾರಿ ನಿರೀಕ್ಷಕರು, ತಿಪಟೂರು ವಲಯ |
| ವಾಸ– | ತಿಪಟೂರು |

**<u>ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ</u>**

1. ನಾನು ಡಿಸೆಂಬರ್ 2019 ಜೂನ್ 2021 ರವರೆಗೆ ತರೀಕೆರೆಯಲ್ಲಿ ಅಬಕಾರಿ ಉಪನಿರೀಕ್ಷಕರು ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಪ್ರಕರಣದಲ್ಲಿ ದಿನಾಂಕ 02.03.2021 ರಂದು ನಾನು ಅಜ್ಜಂಪುರ ತಾಲ್ಲೂಕಿನ ಕೆಂಚಾಪುರ ಗ್ರಾಮದ ಬಳಿ ಚಾಸ–4 ಮತ್ತು 5 ರವರ ಜೊತೆ ಗಸ್ತು ಕರ್ತವ್ಯದಲ್ಲಿದಾಗ ಕೆಂಚಾಪುರ – ಸಿದ್ದಿಪುರ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿರುವ ನೀರಿನ ಟ್ಯಾಂಕು ಹತ್ತಿರ ಒಬ್ಬ ವ್ಯಕ್ತಿಯ ಅಕ್ರಮವಾಗಿ ಮಧ್ಯವನ್ನು ಶೇಖರಿಸಿ ಮಾರಾಟ ಮಾಡುತ್ತಿದ್ದಾನೆ ಎಂಬ ನನಗೆ ಮಾಹಿತಿ ಬಂದ ಮೇಲೆ ನಾನು ಸರ್ಕಾರಿ ವಾಹದಲ್ಲಿ ಚಾಸ–4 ಮತುತ 5 ರವರನ್ನು ಕರೆದುಕೊಂಡು ಮಾಹಿತಿ ಬಂದ ಸ್ಥಳದ ಕಡೆಗೆ ಹೋದೆನು. ನಂತರ ಕೆಂಚಾಪುರ ಗ್ರಾಮದ ರಸ್ತೆಯ ಬಳಿ ಇದ್ದ ಚಾಸ–2 ಮತ್ತು 3 ರವರನ್ನು ಪಂಚರನ್ನಾಗಿ ನಮ್ಮ ಜೊತೆ ಕರೆದುಕೊಂಡೆನು. ನಂತರ ಮಾಹಿತಿ ಬಂದ ಸ್ಥಳಕ್ಕೆ ಬಂದಾಗ ನೀರಿನ ಟ್ಯಾಂಕು ಹತ್ತಿರ ಒಬ್ಬ ವ್ಯಕ್ತಿಯು ತನ್ನ ಹೆಗಲ ಮೇಲೆ ಒಂದು ಚೀಲವನ್ನು ಇಟ್ಟುಕೊಂಡು ಹೋಗುತ್ತಿರುವುದು ಕಂಡು ಬಂದಿದ್ದು ನಮ್ಮ ವಾಹನವನ್ನು ನೋಡಿ ಓಡಿ ಹೋದನು. ನಂತರ ನಾವು ಆತನನ್ನು ಹಿಡಿಯಲು ಪ್ರಯತ್ನ ಮಾಡಿದೆವು ಆದರೆ ಆತನು ಸಿಗಲಿಲ್ಲ. ನಂತರ ನಾನು ಸಿಬ್ಬಂದಿಯವರ ಸಹಾಯದಿಂದ ಪಂಚರ ಸಮಕ್ಷಮ ಸ್ಥಳವನ್ನು ಪರಿಶೀಲಿಸಲಾಗಿ ಒಂದು ಪ್ಲಾಸ್ಟಿಕ್ ಚೀಲದಲ್ಲಿ 90 ಎಮ್.ಎಲ್ ನ 40 ರಾಜಾ ವಿಸ್ಕಿಯ ಸ್ಯಾಚೇಟುಗಳು ಕಂಡು ಬಂದವು. ಅವುಗಳನ್ನು ಇಟ್ಟುಕೊಳ್ಳಲು ಅಥವಾ ಸಾಗಾಟ ಮಾಡಲು ಸ್ಥಳದಲ್ಲಿ ಯಾವುದೇ ಲೈಸನ್ಸ್ ಅಥವಾ ರಹದಾರಿ ಇರಲಿಲ್ಲ. ನಂತತರ ಓಡಿ ಹೋದ ವ್ಯಕ್ತಿಯ ಬಗ್ಗೆ ಸ್ಥಳೀಯರಾದ ಪಂಚರ ಹತ್ತಿರ ವಿಚಾರಿಸಲಾಗಿ ಅವರು ಸದರಿ ವ್ಯಕ್ತಿಯ ಹೆಸರು ಭರತ್ ನಾಯ್ಕ ವಾಸ ಕೆಂಚಾಪುರ ಎಂದು

ತಿಳಿಸಿದರು. ನಂತರ ನಾನು ಚಾಸ-2 ಮತ್ತು 3 ರವರ ಸಮಕ್ಷಮ ಸಂಜೆ 6.30 ರಿಂದ 7.30 ರ ಮಧ್ಯದಲ್ಲಿ ಪಂಚನಾಮೆಯ್ನು ಜರುಗಿಸಿ ಮಧ್ಯವನ್ನು ನನ್ನ ಶಕ್ಕೆ ಪಡೆದಿರುತ್ತೇನೆ. ಸ್ಥಳದಲ್ಲಿಯೇ ಪಂಚನಾಮೆಯನ್ನು ಬರೆದು ಸಾಕ್ಷಿದಾರರ ಸಹಿಯನ್ನು ಪಡೆದುಕೊಂಡಿರುತ್ತಾರೆ ಮತ್ತು ಮಧ್ಯವನ್ನು ಒಂದು ಹಳದಿ ಬಣ್ಣದ ಚೀಲಕ್ಕೆ ಹಾಕಿ ರಾಸಾಯನಿಕ ಪರೀಕ್ಷೆಗಾಗಿ ಸೀಲು ಮಾಡಿ ಇಟ್ಟಿರುತ್ತೇನೆ ಮತ್ತು ಚೀಲಕ್ಕೆ ಗುರುತಿನ ಚೀಟಿಗಳನ್ನು ಅಂಟಿಸಿರುತ್ತೇನೆ. ನಂತರ ಮು.ಮಾಲಿನೊಂದಿಗೆ ಠಾಣೆಗೆ ಹಿಂದಿರುಗಿ ಸರ್ಕಾರದ ಪರವಾಗಿ ನಾನು ದೂರನ್ನು ನೀಡಿ ಠಾಣಾ ಮೊ.ನಂ.34/2020-21 ರಲ್ಲಿ ನಾನೇ ಪ್ರ.ವ.ವರದಿಯನ್ನು ದಾಖಲಿಸಿಕೊಂಡು ಅದನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಅದರ ನಕಲುಗಳನ್ನು ನನ್ನ ಮೇಲಾಧಿಕಾರಿಗಳವರಿಗೆ ಸಲ್ಲಿಸಿರುತ್ತೇನೆ. ಅದೇ ರೀತಿ ಅಮಾನತ್ತು ಪಡಿಸಿಕೊಂಡು ಮು.ಮಾಲನ್ನು ನಮ್ಮ ಠಾಣಾ ಮಾಲು ಪಟ್ಟಿ ನಂ. 34/2020-21 ರಲ್ಲಿ ದಾಖಲಿಸಿಕೊಂಡು ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

3. ನಾನು ಜರುಗಿಸಿದ ಪಂಚನಾಮೆಯನ್ನು ನಿಪಿ-1 ಹಾಗೂ ಅದರ ಮೇಲಿರುವ ನನ್ನ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

4. ನಾನು ನೀಡಿದ ದೂರನ್ನು ನಿಪಿ-2 ಹಾಗೂ ಅದರ ಮೇಲಿರುವ ನನ್ನ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

5. ನಾನು ದಾಖಲಿಸಿಕೊಂಡ ಪ್ರ.ವ.ವರದಿಯನ್ನು ನಿಪಿ-3 ಹಾಗೂ ಅದರ ಮೇಲಿರುವ ನನ್ನ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

6. ನಾನು ಪಂಚರಿಗೆ ನೀಡಿದ ನೋಟೀಸುಗಳನ್ನು ನಿಪಿ-4 ಮತ್ತು 5 ಹಾಗೂ ಅವುಗಳ ಮೇಲಿರುವ ನನ್ನ ಸಹಿಗಳನ್ನು ನಿಪಿ-4(ಎ) ಮತ್ತು 5(ಎ) ಎಂದು ಗುರುತಿಸಲಾಯಿತು.

7. ಓಡಿ ಹೋದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇದ್ದಾನೆ. ಮು.ಮಾ ನ್ನು ನೋಡಿ ಗುರುತಿಸುತ್ತೇನೆ. ಅವುಗಳನ್ನು ಒಟ್ಟಾಗಿ ಚೀಲದೊಂದಿಗೆ ಮು.ಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಡಿ.ಸಿ.ಪಿ. ವಕೀಲರಿಂದಃ-**

1. ನಾನು ದಿನಾಂಕ 02.03.2021 ರಂದು ತರೀಕೆರೆ ವಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ತರೀಕೆರೆ ಮತ್ತು ಅಜ್ಜಂಪುರ ತಾಲ್ಲೂಕುಗಳಲ್ಲಿ ಬಹಳಷ್ಟು ಮಧ್ಯದ ಅಂಗಡಿಗಳು ಮತ್ತು ಬಾರ್ ಇರುತ್ತವೆ ಎಂದರೆ ಸರಿ. ಸದರಿ ಅಂಗಡಿಗಳಲ್ಲಿ ಸಾಮಾನ್ಯವಾಗಿ ಮು.ಮಾ-1 ತರಹದ ಸ್ಯಾಚೇಟುಗಳು ಸಿಗುತ್ತವೆ ಎಂದರೆ ಸರಿ. ಮು.ಮಾ-1 ರ ಮೇಲೆ ಬ್ಯಾಚ್ ನಂಬರ್ ಇರುವುದಿಲ್ಲ

ಎಂದರೆ ಅದನ್ನು ಮೊದಲೇ ಹರಿದುಹಾಕಲಾಗಿತ್ತು ಎಂದು ನುಡಿಯುತ್ತಾರೆ. ಈ ವಿಚಾರವನ್ನು ನಾನು ಮಹಜರ್ ಮತ್ತು ವರದಿಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾಳಿ ನಡೆಸಲು ಹೋಗಿದ್ದೆ ಮತ್ತು ಆಗ ಆರೋಪಿಯು ಸ್ಥಳದಿಂದ ಓಡಿ ಹೋಗಿರುತ್ತಾನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಹಜರ್ ಕಾಲದಲ್ಲಿ ಭಾವಚಿತ್ರ ತೆಗೆದಿರುವುದಿಲ್ಲ.

2. ನಮ್ಮ ಕಛೇರಿಯಲ್ಲಿ ನನಗೆ ಮೇಲಾಧಿಕಾರಿಗಳು ಇರುತ್ತಾರೆ ಎಂದರೆ ಸರಿ. ನನ್ನ ಮೇಲಾಧಿಕಾರಿಗಳು ನನಗೆ ಈ ಪ್ರಕರಣದಲ್ಲಿ ಪ್ರ.ವ.ವರದಿಯನ್ನು ದಾಖಲಿಸಲು ಆದೇಶಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ತೊಂದರೆ ಕೊಡಲು ನಾನೇ ಸ್ವತಃ ಅವರ ವಿರುದ್ಧ ಸುಳ್ಳು ಪ್ರಕರಣದ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಸಾರ್ವಜನಿಕ ಸ್ಥಳದಲ್ಲಿ ಮದ್ಯ ಮಾರಾಟ ಮಾಡುತ್ತಿದ್ದನು. ಆರೋಪಿಯು ಮದ್ಯ ಮಾರಾಟ ಮಾಡುತ್ತಿದ್ದನು ಎಂದು ನಾನು ಸುಳ್ಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿಯ ವ್ಯಕ್ತಿ ಪರಿಚಯ ಇರುವುದಿಲ್ಲ. ನಾನು ಪಂಚರನ್ನು ಹೊರತು ಪಡಿಸಿ ಬೇರೆಯವರ ಹತ್ತಿರ ಆರೋಪಿಯ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ಕಾರಣ ಸ್ಥಳದಲ್ಲಿ ಬೇರೆ ಯಾರೂ ಇರಲಿಲ್ಲ. ನಾನು ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಮತ್ತು ಮು.ಮಾಲಿಗೂ ಯಾವುದೇ ರೀತಿ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಛೇರಿಯ ಅಂಖ್ಯೆ-ಸಂಖ್ಯೆಗೋಸ್ಕರ ಸುಳ್ಳು ಪ್ರಕರಣವನ್ನು ಹಾಕಲಾಗಿದೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಸಹಿ/-

(ಮುಜಫರ್)

ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ

ತರೀಕೆರೆ